o.s. 124/2009
Dt:17.08.2026

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು**

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)

ದಿಃ 17.08.2026.

ಅಸಲು ದಾವಾ ನಂ. 124/2009

ಪಿ.ಡಬ್ಲ್ಯೂ -1

(ಮುಂದುವರಿದ ಪಾಟೀ ಸವಾಲುಃ ಶ್ರೀ ಆರ್. ಕೆ. ಎಂ. ವಕೀಲರಿಂದ 1ನೇ ಪ್ರತಿವಾದಿಯ ಪರವಾಗಿ)

ನನ್ನ ಅಜ್ಜ ಸಣ್ಣದಾಸಿ ಮರಿಗೌಡರಿಗೆ 8 ಜನ ಮಕ್ಕಳಿದ್ದು, 3 ಜನ ಹೆಣ್ಣು ಮಕ್ಕಳು, 5 ಜನ ಗಂಡು ಮಕ್ಕಳು ಇರುತ್ತಾರೆ. ನನಗೆ 63 ವರ್ಷ ವಯಸ್ಸು ಆಗಿರುತ್ತದೆ. ಹಿಸ್ಸೆ ಪಟ್ಟಿಗೆ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಸಹಿ ಹಾಕಿದ್ದಾರೆಯೇ ಎಂದರೆ ಸಾಕ್ಷಿ ಗಂಡು ಮಕ್ಕಳು ಹಿಸ್ಸೆ ಮಾಡಿಕೊಂಡಿರುತ್ತಾರೆ ಹೆಣ್ಣು ಮಕ್ಕಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1969ರಲ್ಲಿ ನಾನು ಜನಿಸಿರುವುದಿಲ್ಲ. ನಾನು ಹಾಕಿರುವ ಹಿಸ್ಸೆ ಪಟ್ಟಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಹಿಸ್ಸೆ ಪಟ್ಟಿಯನ್ನು ಬರೆದವರು ಯಾರು, ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಬಂದಿರುವ ಹಿಸ್ಸೆಯ ಸ್ವತ್ತುಗಳು ಎಂದೆರೆ ಸಾಕ್ಷಿಯು ಚಿಕ್ಕಳ್ಳಿ ಪಂಚಾಯಿತಿ 16 ಕಂಬದ ತೊಟ್ಟಿ ಹಟ್ಟಿ ಒಂದು ಸೈಟು, ಒಂದು ಹಿತ್ತಲು ಸ.ನಂ. 203ರಲ್ಲಿ , 5 ಎಕರೆ 4 ಗುಂಟೆ ನನ್ನ ತಂದೆಯ ಭಾಗಕ್ಕೆ ಬಂದಿದ್ದು, 5 ಎಕರೆ 4 ಗುಂಟೆ ಜಮೀನನ್ನು ನನ್ನ ತಂದೆ ಸಿದ್ದೇಗೌಡ, ರಾಮೇಗೌಡ, ಲಕ್ಷ್ಮಣೇಗೌಡ, ದಾಸೇಗೌಡರವರು ಮಾರಾಟ ಮಾಡಿ ಬಂದ ಹಣವನ್ನು ಸಮಾನಾಗಿ ಹಂಚಿಕೊಂಡಿದ್ದು, ಹಿರಿ ಮಗ ರಂಗೇಗೌಡರಿಗೆ ಬೇರೆ ಕಡೆ ಸ್ವತ್ತನ್ನು ನೀಡಿರುತ್ತಾರೆ. ಸದರಿ ಜಮೀನನ್ನು ಬೇರೆ ಕಡೆ ಜಮೀನು ಕೊಳ್ಳುವ ಸಲುವಾಗಿ ಲಕ್ಕನಹಳ್ಳಿ ಲಕ್ಕೇಗೌಡರಿಗೆ ಮಾರಾಟ ಮಾಡಿರುತ್ತಾರೆ. ಆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡಿರುವುದಿಲ್ಲ. ನನ್ನ ತಂದೆ ಹಾಗೂ ಅವರ ಅಣ್ಣತಮ್ಮಂದಿರು ಸೇರಿ ಜಮೀನು ಮಾರಾಟ ಮಾಡಿರುವುದಿಲ್ಲ ಹಾಗೂ ಸಮಾನವಾಗಿ ಮಾರಾಟ ಮಾಡಿದ ಹಣವನ್ನು ಹಂಚಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಬಂದ ಹಿಸ್ಸೆಯ ಜಮೀನನ್ನು ವಾದ ಪತ್ರದಲ್ಲಿ ಸೇರಿಸಿರುತ್ತೇನೆ. ವಾದ ಪತ್ರದಲ್ಲಿರುವ ಅಣ್ಣತಮ್ಮಂದಿರು ಹಿಸ್ಸೆ ಮಾಡಿಕೊಂಡ ಜಮೀನಿನ ಸರ್ವೆ ನಂಬರ್ ಗಳನು ಸೇರಿಸಿರುವುದಿಲ್ಲ. ಆದರೆ ಮಾರಾಟ ಮಾಡಿ ಕೊಂಡುಕೊಂಡ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ-10 ರಲ್ಲಿರುವ ವಿಚಾರಗಳನ್ನು ನನಗೆ ಓದಲು ಆಗುವುದಿಲ್ಲ. ಮನೆಯ ಕುಟುಂಬದ ಯಜಮಾನರು ಯಾವುದೇ ಆಸ್ತಿ ಮಾರಾಟ ಮಾಡಲು ಕುಟುಂಬದಲ್ಲಿ ಹಣಕಾಸಿನ ತೊಂದರೆ ಇದ್ದಾಗ ಮಾತ್ರ ಮಾರಾಟ ಮಾಡುತ್ತಾರೆ ಎಂದರೆ ಸಾಕ್ಷಿಯು ಬೇರೆ ಜಮೀನನ್ನು ಕೊಂಡುಕೊಳ್ಳಲು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಮಾರಾಟದ ಸಮಯದಲ್ಲಿ ಬೇರೆ ಜಮೀನನ್ನು ಕೊಂಡುಕೊಳ್ಳಲು ಮಾರಾಟ

ಮಾಡುತ್ತಿರುವುದಾಗಿ ಪತ್ರದಲ್ಲಿ ತೋರಿಸಿದ್ದಾರಾ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ. ಪತ್ರದಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಪಾಲಿಗೆ ಬಂದ ಹಿಸ್ಸೆಯ ಈ ಮೇಲೆ ಹೇಳಿದ ಸ್ವತ್ತುಗಳ್ಳದೇ ಸರ್ವೆ ನಂ. 76 ಬಿದುರುಾರುಎಲೆ ಸ. ನಂ. 12/1, 12/2 ಲಕ್ಕನಹಳ್ಳಿ ಹಾಗೂ ಇತರೇ ಜಮೀನುಗಳಿದ್ದು, ನನಗೆ ಹೇಳಲು ಸಾಧ್ಯ ವಾಗುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದಲ್ಲಿ ನನ್ನ ತಂದೆ ಹಾಗೂ ಅವರ ಅಣ್ಣ ತಮ್ಮಂದಿರಿಗೆ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಹಿಸ್ಸೇ ಬಂದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರ ಕ್ರಯಪತ್ರದ ಸಾಕ್ಷಿದಾರರು ಯಾರಿಗೆ ಬರೆದಿದ್ದಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಕಾರಣ ನಾನು ಅವಿದ್ಯಾವಂತೆ. ನನ್ನ ತಂದೆ ಯಾವ ಉದ್ದೇಶಕ್ಕಾಗಿ ಜಮೀನನ್ನು ಮಾರಾಟ ಮಾಡುವ ಉದ್ದೇಶ ಎಂದರೆ ಜಮೀನು ಖರೀದಿ ಮಾಡಲು ನಿಪಿ-10ನ್ನು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ನಿಪಿ-10 ನ್ನು ಕೈ ಸಾಲ ತೀರಿಸಲು ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಜಮೀನು ತೆಗೆದುಕೊಳ್ಳಲು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-9, 10 ನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10ರಲ್ಲಿರುವ ವಿಚಾರಗಳು ಸುಳ್ಳು ಎಂದು ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ನೀಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ ದೀಪಿಕ ಎನ್.)

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ, ಅರಕಲಗೂಡು